ಕಾರ್ಮಿಕ ಹಕ್ಕುಗಳ
ಹೋರಾಟ ಸಮಿತಿ (MASA)



# ಕಾರ್ಮಿಕರ ಹಕ್ಕೊತ್ತಾಯ ಸಮಾವೇಶ





**ಡಿಸೆಂಬರ್ 19, 2021**
ಬೆಳಿಗ್ಗೆ 11 ಗಂಟೆಗೆ
**ಫ್ರೀಡಂ ಪಾರ್ಕ್, ಬೆಂಗಳೂರು**

ಬೆವರಿನ
**ಪಾಲು**
ಘನತೆಯ
**ಬಾಳು**


ಮೆರವಣಿಗೆ:
**ಮೆಜೆಸ್ಟಿಕ್ ರೈಲು ನಿಲ್ದಾಣದಿಂದ ಬೆಳಿಗ್ಗೆ 10 ಗಂಟೆಗೆ.**



## ಆತ್ಮೀಯ ಕಾರ್ಮಿಕ ಬಂಧುಗಳೇ,

ವಿದ್ಯುತ್ ಶಕ್ತಿ ಬಳಕೆಗೆ ಮೀಟರ್ ಇದೆ, ಓಡಾಡುವ ಗಾಡಿಗಳ ಅಶ್ವಶಕ್ತಿಗೆ ಮೀಟರ್ ಇದೆ ನಿಸರ್ಗ ನೀಡುವ ನೀರಿನ ಬಳಕೆಗೂ ಮೀಟರ್ ಇದೆ ಇದೆಲ್ಲವನ್ನು ದಾಟಿ ಸಂಪರ್ಕ ಸಂವಹನಕ್ಕೂ ಮೀಟರ್ ಬಂದು ಬಿಟ್ಟಿದೆ. ಮಾರುಕಟ್ಟೆಯಲ್ಲಿರುವ ಪ್ರತಿಯೊಂದು ಸರಕನ್ನೂತೂಗಿ ಬೆಲೆಕಟ್ಟಿ ಮಾರಲಾಗುತ್ತಿದೆ ಆದರೆ ಸಮಾಜಕ್ಕೆ ಅತ್ಯವಶ್ಯಕವಾಗಿ ಬೇಕಾದ ಎಲ್ಲಾ ಪದಾರ್ಥಗಳನ್ನು ತಯಾರಿಸುವ ಮನೆ,ಮಠ, ರಸ್ತೆ,ರೈಲು ನಿರ್ಮಿಸುವ ಶ್ರಮ ಶಕ್ತಿಯ ಬಳಕೆಗೆ ಮೀಟರ್ ಇಲ್ಲ ಕಾರ್ಮಿಕರ ತೋಳಿನಿಂದ ಪ್ರತಿಯೊಂದು ತಾಸಿಗೆ ಖರ್ಚಾಗುವ ಶ್ರಮಶಕ್ತಿಯನ್ನು ಅಳತೆ ಮಾಡಲು ಅವಕಾಶಗಳಿಲ್ಲ ಅಂದರೆ, ಶ್ರಮಶಕ್ತಿಯಿಂದ ತಯಾರಾದ ಪ್ರತಿಯೊಂದನ್ನು ತೂಗಿ ಅಳತೆ ಮಾಡಿ ಮಾರುವ ಮಾಲೀಕರು ಶ್ರಮಶಕ್ತಿಯ ಸಗಟು ಖರೀದಿಯ ಮೂಲಕ ಅನ್ಯಾಯ ಎಸಗುತ್ತಿದ್ದಾರೆ ಶ್ರಮಕ್ಕೆ ತಕ್ಕ ಸಂಬಳ ನೀಡುವುದಿರಲಿ ಕಾರ್ಮಿಕರ ಶರೀರದಲ್ಲಿ ಅಗತ್ಯವಾಗಿ ಬೇಕಾದ ಜೀವನಾವಶ್ಯಕ ಪದಾರ್ಥಗಳ ಖರೀದಿಗೆ ಕನಿಷ್ಟ ಸಾಕಾಗುವಷ್ಟು ಸಂಬಳ ಸಹ ನೀಡುತ್ತಿಲ್ಲ, ದೇಶದ ಒಟ್ಟು 50 ಕೋಟಿ ಶ್ರಮಜೀವಿಗಳು ಈ ಕನಿಷ್ಟ ವೇತನದಿಂದ ವಂಚಿತರಾಗಿದ್ದಾರೆ ಇಂದಿನ ದಿನಮಾನದಲ್ಲಿ ಕನಿಷ್ಟ ಮಾಸಿಕ 25,000 ರೂಪಾಯಿ ವೇತನ ನೀಡಬೇಕು ಎಂಬುದು ನಮ್ಮ ಒತ್ತಾಯ ವಾಗಿದೆ ಹಾಗಯೇ ಒಂದೇ ಕೆಲಸವನ್ನು ಮಾಡುವ ಖಾಯಂ ಹಾಗೂ ಗುತ್ತಿಗೆ ನೌಕರರಲ್ಲಿ ಅಜಗಜಾಂತರ ವ್ಯತ್ಯಾಸವಿದೆ, ಕಾರ್ಮಿಕರ ಹೋರಾಟದ ಫಲವಾಗಿ ಸುಪ್ರೀಂ ಕೋರ್ಟ್ ಹತ್ತು ಹಲವು ಬಾರಿ ತೀರ್ಪು ನೀಡಿ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಲು ಹೇಳಿದ್ದರು ಇದನ್ನು 99% ರಷ್ಟು ಕೆಲಸದ ಸ್ಥಳಗಳಲ್ಲಿ ಜಾರಿಗೆ ತಂದಿಲ್ಲ. ಆದ್ದರಿಂದ ಖಾಯಂ ಕೆಲಸವಿದ್ದ ಕಡೆ ಗುತ್ತಿಗೆ ಕಾರ್ಮಿಕ ಪದ್ದತಿಯನ್ನು ರದ್ದುಪಡಿಸ ಬೇಕೆಂಬುದು ನಮ್ಮ ಒತ್ತಾಯವಾಗಿದೆ ಅಲ್ಲದೇ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂಬುದು ನಮ್ಮ ಬಹುಮುಖ್ಯ ಒತ್ತಾಯವಾಗಿದೆ.

ಈ ಜಗತ್ತಿನಲ್ಲಿ ಎಲ್ಲವೂ ತುಟ್ಟಿ, ಯಾವುದು ಮಾತ್ರ ಇಲ್ಲ ಅಗ್ಗ.....?
**ಶ್ರಮಿಕರಾದ ನಮ್ಮ ನಿಮ್ಮ ಬೆವರು ಮತ್ತು ಬಾಳು......!!!!**



# ಕಾರ್ಮಿಕರ ಹಕ್ಕೊತ್ತಾಯ ಸಮಾವೇಶ

ಈ ದೇಶದ ಶ್ರಮಜೀವಿ ವರ್ಗದ 100 ವರ್ಷಗಳ ಹೋರಾಟದ ಫಲವಾಗಿ ಜಾರಿಗೆ ಬಂದ 29 ಕೇಂದ್ರ ಕಾರ್ಮಿಕ ಕಾಯ್ದೆಗಳನ್ನು ಸಮೀಕರಿಸಿ 12 ಕಾಯ್ದೆಗಳನ್ನು ಸಂಪೂರ್ಣ ರದ್ದು ಮಾಡಿ ಕೇಂದ್ರ ಸರ್ಕಾರ ಕೇವಲ 4 ಕಾರ್ಮಿಕ ಸಂಹಿತೆಗಳನ್ನು ತಯಾರು ಮಾಡಿದೆ ಈ ಸಂಹಿತೆಗಳು ಜಾರಿಯಾದರೆ ಕೆಲಸದ ಖಾತ್ರಿ ಹಾಗೂ ಕನಿಷ್ಟ ವೇತನದ ಖಾತ್ರಿ ಮತ್ತು ಇವುಗಳನ್ನು ಕೇಳುವ ಕಾರ್ಮಿಕ ಸಂಘದ ಪಾತ್ರವು ಹೊರಟು ಹೋಗುತ್ತದೆ, ಕಾರ್ಮಿಕರ ಶ್ರಮವನ್ನು ಸಗಟು ದರದಲ್ಲಿ ಖರೀದಿಸುವ ಕಾರ್ಪೋರೆಟ್ ಬಂಡವಾಳಿಗರ ಬಂಪರ್ ಲಾಭದಿಂದ ಹೊಸ ಕಾರ್ಮಿಕ ಕಾಯ್ದೆಗಳನ್ನು ಜಾರಿಗೆ ತರಲಾಗಿದೆ, ಕೃಷಿ ಕ್ಷೇತ್ರದಲ್ಲು ಇಂತದ್ದೇ ಕಾರಣದಿಂದ ತರಲಾದ ಕಾಯ್ದೆಗಳನ್ನು ರೈತರ ಅಭೂತಪೂರ್ವ ಹೋರಾಟಕ್ಕೆ ಮಣಿದು ಮೋದಿ ಸರ್ಕಾರ ಮೊನ್ನೆ ಕೃಷಿ ಕಾಯ್ದೆಗಳನ್ನು ಹಿಂಪಡೆದಿದೆ

ಈ ಹಿನ್ನಲೆಯಲ್ಲಿ ಕರ್ನಾಟಕದ ವಿವಿಧ ರಂಗಗಳಲ್ಲಿ ಕೆಲಸ ಮತ್ತು ವೇತನದ ಖಾತ್ರಿ ಇಲ್ಲದೇ ದುಡಿಯುತ್ತಿರುವ ಅಸಂಘಟಿತ ಕಾರ್ಮಿಕರು ಈ ಕೆಳಗಿನ ಒತ್ತಾಯಗಳನ್ನು ಒಗ್ಗೂಡಿ ಕೇಳಲು ದಿ: 19–12–2021 ರಂದು ಸಮಾವೇಶ ಗೊಳ್ಳಬೇಕಿದೆ, ಕೈಗಾರಿಕಾ ಕಾರ್ಮಿಕರ ಜೊತೆ ಅಸಂಘಟಿತ ಕಾರ್ಮಿಕರು, ಸ್ಕೀಮ್ ಕಾರ್ಮಿಕರು ಈ ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

## ಕೇಂದ್ರಿಯ ಹಕ್ಕೊತ್ತಾಯಗಳು

1. ರೈತ ವಿರೋಧಿ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆದ ರೀತಿಯಲ್ಲಿಯೇ ಕಾರ್ಪೋರೇಟ್ ಮಾಲೀಕರ ಪರವಾದ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಬೇಕು.
2. ರೈತರಿಗೆ ಕನಿಷ್ಟ ಬೆಂಬಲ ಬೆಲೆ – ಕಾರ್ಮಿಕರಿಗೆ ಕನಿಷ್ಟ 25,000 ಮಾಸಿಕ ವೇತನ ಕಡ್ಡಾಯ ಮಾಡಬೇಕು.
3. ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿ ಮಾಡಿ, ಖಾಯಂ ಕೆಲಸವಿದ್ದ ಕಡೆ ಗುತ್ತಿಗೆ ಪದ್ದತಿ ರದ್ದು ಪಡಿಸಬೇಕು.
4. ಸಾರ್ವಜನಿಕ ಉದ್ದಿಮೆಗಳ ಮಾರಾಟ ಬಂದ್ ಮಾಡಿ, ಉದ್ಯೋಗ ನೀಡುವ ಉದ್ದಿಮೆಗಳನ್ನು ಹೆಚ್ಚು ಮಾಡಬೇಕು.

## ತಕ್ಷಣದ ಹಕ್ಕೊತ್ತಾಯಗಳು

1. ಬಳ್ಳಾರಿ ಜಿಲ್ಲೆಯ ಎಲ್ಲಾ ಗಣಿ ಕಾರ್ಮಿಕರಿಗೆ ಆರ್ ಅಂಡ್ ಆರ್ ಅಡಿಯಲ್ಲಿ ಪರಿಹಾರ ನೀಡಬೇಕು.
2. ಯರಮರಸ ಥರ್ಮಲ್ ಪವರ್ ಪ್ಲಾಂಟ್ ಕಾರ್ಮಿಕರಿಗರ ಎಸ್ ಆರ್ ದರದಲ್ಲಿ ವೇತನ ಹಾಗೂ ಎಲ್ಲಾ ಶಾಸನಬದ್ಧ ಸೌಲಭ್ಯಗಳನ್ನು ನೀಡಬೇಕು.
3. ತುಂಗಭದ್ರಾ –ಹೇಮಾನಾಲ ಸೇರಿದಂತೆ ರಾಜ್ಯದ ಎಲ್ಲಾ ಯೋಜನೆಗಳ ಕಾರ್ಮಿಕರ ಬಾಕಿ ವೇತನ ಪಾವತಿಸಿ ವರ್ಷ ಪೂರ್ತಿ ಕೆಲಸ ನೀಡಬೇಕು.
4. **BWSSB, BBMP** ಮತ್ತು ರೆಸ್‌ಕೋರ್ಸ್ ಗುತ್ತಿಗೆ ಕಾರ್ಮಿಕರಿಗೆ ಸಮಾನ ವೇತನ, ಗ್ರ್ಯಾಚ್ಯುಟಿ, ಆರೋಗ್ಯ ವಿಮೆ ಮತ್ತು ಕೆಲಸದ ಭದ್ರತೆ ನೀಡಬೇಕು.
5. ಅನ್ನಭಾಗ್ಯ ಯೋಜನೆ ಕಾರ್ಮಿಕರಿಗೆ ಗ್ರ್ಯಾಚ್ಯುಟಿ ಮತ್ತು ಆಹಾರ ಇಲಾಖೆಯಿಂದಲೇ ನೇರವಾಗಿ ಸಂಬಳ ಪಾವತಿ ಮಾಡಲು ಕ್ರಮಕೈಗೊಳ್ಳಬೇಕು.
6. ಎಲ್ಲಾ ಹಮಾಲಿ (ಲೋಡಿಂಗ್) ಕಾರ್ಮಿಕರಿಗೆ ಮಹಾರಾಷ್ಟ್ರ ಮಾದರಿಯ ಕಲ್ಯಾಣ ಮಂಡಳಿಯನ್ನು ಸ್ಥಾಪನೆ ಮಾಡಬೇಕು.
7. ಪ್ರತಿ ರಾಜ್ಯದಲ್ಲಿ ವಲಸೆ ಕಾರ್ಮಿಕರ ಪ್ರತ್ಯೇಕ ಕಲ್ಯಾಣ ಮಂಡಳಿಯನ್ನು ಸ್ಥಾಪಿಸಬೇಕು.
8. ನೇಕಾರ ಕಾರ್ಮಿಕರಿಗೆ ಕಟ್ಟಡ ಕಾರ್ಮಿಕರ ಮಾದರಿಯಲ್ಲಿ ಕಲ್ಯಾಣ ಮಂಡಳಿ ಸ್ಥಾಪಿಸಬೇಕು.

**ಸಹಭಾಗಿ ಸಂಘಟನೆಗಳು:**

- ಟ್ರೇಡ್ ಯೂನಿಯನ್ ಸೆಂಟರ್ ಆಫ್ ಇಂಡಿಯಾ (TUCI)
- ಕರ್ನಾಟಕ ಶ್ರಮಿಕ ಶಕ್ತಿ (KSS)
- **BWSSB** ಗುತ್ತಿಗೆ ಕಾರ್ಮಿಕರ ಸಂಘ
- **BBMP** ಗುತ್ತಿಗೆ ಪೌರ ಕಾರ್ಮಿಕರ ಸಂಘ
- ಬೆಂಗಳೂರು ರೆಸ್ ಕೋರ್ಸ್ ಕಾರ್ಮಿಕರ ಸಂಘ
- ಕರ್ನಾಟಕ ರಾಜ್ಯ ಲೋಡಿಂಗ್ & ಅನ್ ಲೋಡಿಂಗ್ ಕಾರ್ಮಿಕರ ಒಕ್ಕೂಟ(ರಿ)
- ವಲಸೆ ಕಾರ್ಮಿಕರ ಸೌಹಾರ್ದ ಕೇಂದ್ರ (MWSN)
- ಮಂಡ್ಯ ರೈಲ್ವೆ ಗೂಡ್ಸ್ ಶೆಡ್ ಕಾರ್ಮಿಕರ ಸಂಘ(ರಿ)
- **KSBCL** ಲೋಡಿಂಗ್ ಕಾರ್ಮಿಕರ ಸಂಘ(ರಿ)
- ಕೂಲಿ ನೇಕಾರ ಕಾರ್ಮಿಕರ ಬಳಗ

ಕಾರ್ಮಿಕ ಹಕ್ಕುಗಳ ಹೋರಾಟ ಸಮಿತಿ
(MASA)

ಸಂಪರ್ಕ 9986598959, 9945407490
9342517177, 9019683751